ಯಾರಿಗೂ ಗಿರೀಶ ಗೊತ್ತೇ ಇಲ್ವಲ್ಲಾ ಅಂತ. ಗಿರೀಶ ಆಚೆ ಬಂದು 'ನಾನು ತಮಿಳು, ತೆಲುಗು ಸೇರಿದಂತೆ ಸಿಕ್ಕ ಸಿಕ್ಕ ಭಾಷೆಗಳಲ್ಲೆಲ್ಲ ಆ್ಯಕ್ಟ್ ಮಾಡ್ತಾ ಇದ್ದೀನಿ; ಜನ ನನ್ನ ಗುರ್ತು ಹಿಡೀಲಿ ಅಂತ. ಇವನ್ಯಾರೋ ನಾನು ಗೊತ್ತೇ ಇಲ್ಲ ಅಂತಾನಲ್ಲಾ' ಎಂದು ಸಿಟ್ಟಿನಿಂದ ಬೈಯುತ್ತಾ ಇದ್ದಾರೆ. ಅದನ್ನು ನೋಡಿ ನಾನು ಮತ್ತು ಸರಸ್ವತಿ ನಕ್ಕಿದ್ದೇ ನಕ್ಕಿದ್ದು.

ನಾನು ಅವರನ್ನು ಕೊನೆಯ ಸಲ ಭೇಟಿಯಾಗಿದ್ದೂ 'ಬೆಳಕು' ಟ್ರಸ್ಟ್ ಮೀಟಿಂಗ್‌ನಲ್ಲಿಯೇ. ಅವರ ಮನೆಗೆ ಹೋಗಿದ್ದೆ. ಅಷ್ಟರಲ್ಲಾಗಲೇ ಮನೆಯಲ್ಲಿ ಹಾಕಿಕೊಳ್ಳಲಿಕ್ಕೆ ಸ್ವಲ್ಪ ದೊಡ್ಡ ಆಕ್ಸಿಜನ್ ಮೆಷಿನ್ ಇಟ್ಟುಕೊಂಡಿದ್ದರು. ಉದ್ದುದ್ದ ಪೈಪ್‌ಗಳನ್ನು ಇಟ್ಟುಕೊಂಡಿದ್ದರು. ಮನೆಯಲ್ಲಿ ಯಾವ ರೂಮಿಗೆ ಹೋದರೂ ಪೈಪ್ ಬರಬೇಕು ಅಂತ. ತಮ್ಮ ಕಾಯಿಲೆಯನ್ನೂ ಅವರು ಎಷ್ಟು ಪಾಸಿಟೀವ್ ಆಗಿ ತೆಗೆದುಕೊಳ್ಳುತ್ತಿದ್ದರೆಂದರೆ ಆಶ್ಚರ್ಯವಾಗುತ್ತದೆ. 'ನೋಡು ಜಯಂತಿ, ಇಷ್ಟು ವರ್ಷಗಳ ನಂತರ ನಾನು ಸರಸ್ವತಿ ಬಾಲ್ಕನಿಯಲ್ಲಿ ಕೂತು ಮಾತಾಡುವ ಹಾಗೆ ಆಗಿದೆ. ನನ್ನ ಹೆಂಡತಿಯ ಜೊತೆ ಈ ಸುಖವನ್ನು ನಾನು ಯಾವತ್ತೂ ಅನುಭವಿಸಿರಲಿಲ್ಲ' ಎಂದು ಹೇಳುತ್ತಿದ್ದರು. ಹೀಗೆ ಎಲ್ಲದರಲ್ಲಿಯೂ ಅವರದು ಪಾಸಿಟಿವ್ ದೃಷ್ಟಿಕೋನ. ಅವರ ಜೊತೆ ಇದ್ದರೆ ನಮಗೂ ಆ ಧನಾತ್ಮಕ ಶಕ್ತಿ ಬರುತ್ತಿತ್ತು.

ಎಲ್ಲಿ, ಯಾವ ಕಾರ್ಯಕ್ರಮಕ್ಕೆ ಹೋಗುವಾಗಲೂ ಅವರು ನಮ್ಮನ್ನು ನೀವೂ ಬರ್ತಿದೀರಾ ಎಂದು ಕೇಳದೆ ಇರುತ್ತಿರಲಿಲ್ಲ. ಹಾಗೆಯೇ ಕಾರ್ಯಕ್ರಮ ಮುಗಿಸಿ ಹೊರಡುವಾಗ 'ಮನೆಗೆ ಬರ್ತಿದೀರಾ? ಬಿಡಬೇಕಾ?' ಎಂದು ಕೇಳದೆ ಹೋಗುತ್ತಿರಲಿಲ್ಲ. ಹಾಗಾಗಿ ನನ್ನ ಬಗ್ಗೆ ಇವರಿಗೆ ಏನೋ ಸ್ಪೆಷಲ್ ಕನ್ಸರ್ನ್ ಇದೆ ಎಂದು ಯಾವಾಗಲೂ ಅನಿಸುತ್ತಿತ್ತು. ಆದರೆ ನಾನು ಬೇರೆ ಹಲವರು ಮಾತಾಡುವುದನ್ನೂ ಕೇಳಿದ್ದೀನಿ. ಗಿರೀಶರ ಬಗ್ಗೆ ಅವರಿಗೂ ಹಾಗೆಯೇ ಅನಿಸಿದೆ. ತಮ್ಮ ಜೊತೆಗೆ ಇರುವವರಿಗೆ ತಾನು ವಿಶೇಷ ಮಹತ್ವ ನೀಡುತ್ತಿದ್ದೇನೆ ಎಂದು ಅನಿಸುವಂತೆ ನಡೆದುಕೊಳ್ಳುತ್ತಿದ್ದುದು ಅವರ ವ್ಯಕ್ತಿತ್ವದ ವಿಶೇಷ. ಅದೇ ಗಿರೀಶ ಕಾರ್ನಾಡ.

ನಿರೂಪಣೆ: ಪದ್ಮನಾಭ ಭಟ್


ನಿಮ್ಮ ನೆಚ್ಚಿನ 'ಮಯೂರ'ವನ್ನು ಅಂಚೆಯ ಮೂಲಕವೂ ತರಿಸಿಕೊಳ್ಳಬಹುದು

ನೀವು ಕಳುಹಿಸುವ ಡಿ.ಡಿ. 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'– ಹೆಸರಿಗೆ ಇರಬೇಕು. ನೇರವಾಗಿ ಖಾತೆಗೆ ಹಣ ಕಳುಹಿಸುವವರು ಬೆಂಗಳೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಹಾತ್ಮ ಗಾಂಧಿ ರಸ್ತೆ ಶಾಖೆಯ ಖಾತೆ ಸಂಖ್ಯೆ 64018861169ಗೆ ಜಮಾ ಮಾಡಬಹುದು. ಬ್ಯಾಂಕ್ ಐಎಫ್‌ಎಸ್‌ಸಿ ಕೋಡ್ SBIN0040006

ಚಂದಾ ವಿವರ
(ಅಂಚೆ ವೆಚ್ಚ ಸೇರಿ)

ದೇಶದ ಒಳಗೆ
ವಾರ್ಷಿಕ: 300.00
(12 ಸಂಚಿಕೆಗಳಿಗೆ)
ಅರ್ಧ ವಾರ್ಷಿಕ 150.00
(6 ಸಂಚಿಕೆಗಳಿಗೆ)

ವಿದೇಶಗಳಿಗೆ
ವಾರ್ಷಿಕ: 1500.00
(12 ಸಂಚಿಕೆಗಳಿಗೆ)
ಅರ್ಧ ವಾರ್ಷಿಕ 750.00
(6 ಸಂಚಿಕೆಗಳಿಗೆ)




ಚಂದಾ ಕಳುಹಿಸುವವರು ತಮ್ಮ ವಿಳಾಸ, ದೂರವಾಣಿ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಬೇಕು

ಪ್ರಸರಣ ವಿಭಾಗ
ದಿ ಪ್ರಿಂಟರ್ಸ್ (ಮೈಸೂರು)
ಪ್ರೈವೇಟ್ ಲಿಮಿಟೆಡ್,
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು– 560 001
ದೂರವಾಣಿ : 080–25880219/202
ಇ-ಮೇಲ್:
circulation–blore@deccanherald.co.in

